ಮಾಡಿಕೊಂಡಿದ್ದೆವು. ಈ ಕೆಲಸಗಳನ್ನು ಸತತವಾಗಿ ಇಪ್ಪತ್ತೈದು ವರ್ಷ ಮಾಡಿಕೊಂಡು ಬಂದ ನಂತರ ಊರಿನ ನೋಟವೂ ಬದಲಾಗಿದೆ.

● ಬಾಲ್ಯದಲ್ಲಿ ನಿಮ್ಮನ್ನು ತುಂಬಾ ಸೆಳೆದುದು ಏನು?

ನನ್ನೂರನ್ನು ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ 48 ಹಾಗೂ ಶಾಲೆ ನನ್ನ ಮೇಲೆ ತುಂಬಾ ಪರಿಣಾಮ ಬೀರಿವೆ. ಹಳ್ಳಿಯಿಂದ ಹೊರಹೋಗುವ ಜಗತ್ತನ್ನು ಹೈವೇ ಕಾಣಿಸುತ್ತಿದೆ ಎನ್ನಿಸುತ್ತಿತ್ತು. ಒಮ್ಮೆ ಸ್ಕೂಲ್‌ಗೆ ಬಂದಿದ್ದ ಇನ್‌ಸ್ಪೆಕ್ಟರ್, 'ಮುಂದೆ ಏನಾಗುವೆ?' ಎಂದು ಕೇಳಿದ ಪ್ರಶ್ನೆಗೆ – 'ಲಾರಿ ಡ್ರೈವರ್ ಆಗ್ತೇನೆ' ಎಂದು ಹೇಳಿ ಹೊಡೆಸಿಕೊಂಡಿದ್ದೆ.

ನಮ್ಮೂರಲ್ಲಿ ಎರಡನೇ ಮಹಾಯುದ್ಧದಲ್ಲಿ ಹಿಟ್ಲರ್ ಪರವಾಗಿ ಹೋರಾಡಿದ ಕೆಲವರಿದ್ದರು. 'ಜರ್ಮನಿಯಮ್ಮನ ಮನೆ' ಎನ್ನುವ ಒಂದು ಮನೆ ಈಗಲೂ ಇದೆ. ಈ ಜರ್ಮನಿಯಮ್ಮನ ಮೊಮ್ಮಗ ಯುದ್ಧಕ್ಕೆ ಹೋಗಿದ್ದ. ಈ ಯುದ್ಧವೀರರ ಬಗ್ಗೆ ಅನೇಕ ಕಥೆಗಳಿವೆ. ಸಿಕ್ಕಾಪಟ್ಟೆ ಮೇಷ್ಟ್ರುಗಳು ನಮ್ಮೂರಲ್ಲಿದ್ದರು. ಸುಮಾರು 100 ಜನ ಶಿಕ್ಷಕರು ಊರಲ್ಲಿದ್ದರು (2,000 ಜನಸಂಖ್ಯೆ). ಈಗಲೂ ಎಪ್ಪತ್ತು ಎಂಬತ್ತು ಜನ ಶಿಕ್ಷಕರಿದ್ದಾರೆ. 1925ರಲ್ಲೇ ಬ್ರಿಟಿಷರು ನಮ್ಮೂರಲ್ಲಿ ಸ್ಕೂಲ್ ಮಾಡಿದ್ದರು. ಎಚ್.ಎಲ್. ನಾಗೇಗೌಡ, ಎಚ್.ಟಿ. ಕೃಷ್ಣಪ್ಪನವರು ಓದಿದ್ದು ಇದೇ ಶಾಲೆಯಲ್ಲಿ. ಈ ಶಾಲೆ ಮತ್ತು ಹೆದ್ದಾರಿ ಇಲ್ಲದೆ ಹೋಗಿದ್ದರೆ ಇವತ್ತಿನ ನಾನು ಇರುತ್ತಿರಲಿಲ್ಲವೇನೊ?

● ನಾಟಕದ ಕಂಪನಿ ಜೊತೆ ಓಡಿಹೋಗಿದ್ದೆ ಅಂದಿರಿ. ನಿಮ್ಮ ನಾಟಕದ ನಂಟು ಯಾವ ಬಗೆಯದು?

ವಿದ್ಯಾರ್ಥಿ ದೆಸೆಯಿಂದಲೂ ನಾಟಕಗಳಲ್ಲಿ ಅಭಿನಯಿಸುತ್ತಿದ್ದೆ. 'ಕುರುಕ್ಷೇತ್ರ' ನಾಟಕದಲ್ಲಿ ಕೃಷ್ಣನ ಪಾತ್ರವನ್ನು ಸಾಮಾನ್ಯವಾಗಿ ಇಬ್ಬರಿಗೆ ನೀಡುವುದು (ಕೃಷ್ಣ 1, ಕೃಷ್ಣ 2) ರೂಢಿ. ಆದರೆ, ಕಂಠಪಾಠ ಮಾಡುವ ನನ್ನ ಸಾಮರ್ಥ್ಯವನ್ನು ಗಮನಿಸಿ ಕೃಷ್ಣನ ಸಂಪೂರ್ಣ ಪಾತ್ರವನ್ನು ನನಗೊಬ್ಬನಿಗೇ ನೀಡುತ್ತಿದ್ದರು. 'ಬಯಲುಸೀಮೆ ಕಟ್ಟೇಪುರಾಣ' ಖ್ಯಾತಿಯ ಬಿ. ಚಂದ್ರೇಗೌಡ ಕೂಡ ನನ್ನ ಜೊತೆ ನಟಿಸುತ್ತಿದ್ದರು. ಒಂದು ಹಂತದ ನಂತರ ಈ ನಾಟಕಗಳು ಬೇಸರ ಹುಟ್ಟಿಸತೊಡಗಿದವು. ಹೊಸದೇನೋ ಬೇಕು ಅನ್ನಿಸುತ್ತಿದ್ದ ಸಂದರ್ಭದಲ್ಲಿ ಬೆಳಗೆರೆ ಕೃಷ್ಣಶಾಸ್ತ್ರಿಗಳ 'ಹಳ್ಳಿ ಚಿತ್ರ' ಎನ್ನುವ ನಾಟಕ ನಿರ್ದೇಶಿಸಿದೆ. ಈ ನಾಟಕವನ್ನು ಬೆಂಗಳೂರಿನಲ್ಲೂ ಪ್ರದರ್ಶಿಸಿ ಪ್ರಶಸ್ತಿ ಪಡೆದೆವು. ಆಮೇಲೆ ಸಾಮಾಜಿಕ ಹಾಗೂ ಪ್ರಾಯೋಗಿಕ ನಾಟಕಗಳತ್ತ ಮನಸ್ಸು ಹರಿಯಿತು. ಈಗಲೂ ನಮ್ಮೂರಿನಲ್ಲಿ ನಾಟಕಗಳನ್ನು ಆಡಿಸುತ್ತೇನೆ. ನನ್ನ ಮಕ್ಕಳ ಹೆಸರಿನಲ್ಲಿ 'ಸಿಹಿ ಕನಸು' ಎನ್ನುವ ರಂಗಮಂದಿರ ಆಗಿದೆ.

● ನಾಟಕ ಆಡಿಕೊಂಡಿದ್ದ ನೀವು ಮೇಷ್ಟರಾದುದು ಹೇಗೆ?

'ಏನಾದರೂ ಆಗು, ಮೊದಲು ಶಿಕ್ಷಕನಾಗಿ ಒಂದು ಕಡೆ ಇರು' ಎಂದು ಅಪ್ಪ ಯಾವಾಗಲೂ ಹೇಳುತ್ತಿದ್ದರು. ಅಪ್ಪನ ಒತ್ತಡ ತಡೆಯಲಾರದೆ, ಮುದ್ದೇನಹಳ್ಳಿಯ ಶಾಲೆಯೊಂದರಲ್ಲಿ ಕೆಲಸಕ್ಕೆ ಅರ್ಜಿ ಹಾಕಿದೆ. ಕೆಲಸವೂ ಸಿಕ್ಕಿತ್ತು. ಆದರೆ, ಆ ಕೆಲಸಕ್ಕೆ ಕುತ್ತು ತಂದುದು ನನ್ನದೊಂದು ಕಥೆ. ಖೋಟಾ ಸ್ವಾಮಿಯೊಬ್ಬನ ಕುರಿತು ಕಥೆ ಬರೆದಿದ್ದೆ. ಆ ಕಥೆಗೊಂದು ಹಿನ್ನೆಲೆಯೂ ಇತ್ತು.